



ಅಳವಡಿಸಿ ಮಾಡಿದ ಆಭರಣ ಸಾಂಪ್ರದಾಯಿಕ ಲುಕ್ ಆದರೂ ಆಧುನಿಕ ಶೈಲಿಯ ಉಡುಗೆಗಳಿಗೆ ಚೆನ್ನಾಗಿ ಒಪ್ಪುತ್ತದೆ.

ಹಿಂದೆ ಮಹಾರಾಜರು ಧರಿಸುತ್ತಿದ್ದ ಮೂರು ಅಥವಾ ಐದೆಳೆ ಸರ ಮದುಮಗನಿಗೆ ಚೆನ್ನಾಗಿ ಕಾಣುತ್ತದೆ. ಪೋಲ್ಕಾ ಮತ್ತು ಮುತ್ತಿನ ಕಾಂಬಿನೇಷನ್‌ನೊಂದಿಗೆ ಮಾಡಿದ ಈ ಒಡವೆ ಮದುಮಗನಿಗೆ ಶೇರ್ವಾನಿ ಧರಿಸಿದಾಗ ಎಲಿಗೆಂಟ್ ಲುಕ್ ಕೊಡಲು ಸಹಕಾರಿಯಾಗುತ್ತದೆ' ಎಂದು ಹೇಳುತ್ತಾರೆ ಸೀಮಾ ಮೆಹ್ತಾ.

ಮದುಮಗಳಿಗೆ ಬೇಕಾದ ವಜ್ರದಾಭರಣಗಳ ಸೆಟ್ ಹೊಸ ಟ್ರೆಂಡ್, ಹೊಸ ಫ್ಯಾಷನಬಲ್ ಇರುವಂಥದ್ದು. ಆಧುನಿಕ ಫ್ಯಾಷನ್ ಜಗತ್ತಿಗೆ ಬೇಕಾದ ಹಾಗೆ ವಜ್ರದ ಆಭರಣಗಳು ಕೈಗೆಟಕುವ ಬೆಲೆಯಲ್ಲಿ ಈಗ ಸಿಗುತ್ತದೆ.

ಬೆಂಗಳೂರಿನ ಕೆಲವು ಪ್ರಮುಖ ಆಭರಣ ಮಳಿಗೆಗಳು ವೈವಿಧ್ಯಮಯ ವಿನ್ಯಾಸಗಳ ವಜ್ರದ ಆಭರಣಗಳನ್ನು ಮದುಮಗಳ ಅಲಂಕಾರಕ್ಕಾಗಿಯೇ ವಿನ್ಯಾಸಗೊಳಿಸುತ್ತಿವೆ. ಕೀರ್ತಿಲಾಲ್ಸ್, ಪ್ರತಿಭಾ ಜ್ಯುವೆಲ್ಲರಿ, ಆಭರಣ ಜ್ಯುವೆಲ್ಲರಿ, ರಾಜ್ ಡೈಮಂಡ್ಸ್, ಕೃಷ್ಣಯ್ಯ ಚೆಟ್ಟಿ ಆಭರಣ ಮಳಿಗೆ, ನೀಲಕಂಠ ಜ್ಯುವೆಲ್ಲರಿ ಮುಂತಾದವು ವಜ್ರಾಭರಣಗಳಿಗೆ ಹೆಸರಾದವು.

ಸಾಮಾನ್ಯವಾಗಿ ವಜ್ರದ ಒಡವೆ ಮೇಲೆ ಮಹಿಳೆಯರ ಒಲವು, ಆಸಕ್ತಿ ಎಂದಿಗೂ ಕಡಿಮೆಯಾಗಲ್ಲ. ಈ ಆಭರಣಗಳು ಅಮೂಲ್ಯ ಆಸ್ತಿ. ಸಂಗ್ರಹಯೋಗ್ಯವಾದ ಈ ಆಭರಣಗಳ ಬಣ್ಣ ಮಾಸುವುದಿಲ್ಲ, ಅಂದಗೆಡುವುದಿಲ್ಲ. ಎಷ್ಟು ಬಾರಿ ಬಳಸಿದರೂ ಹಳತಾಗುವುದೇ ಇಲ್ಲ. ಮದುವೆ, ಮುಂಜಿ ಮುಂತಾದ ಶುಭ ಸಮಾರಂಭಗಳಿಗೆ, ಪಾರ್ಟಿ, ಔತಣಕೂಟದಂತಹ ಸಮಾರಂಭಗಳಿಗೆ ಸಮಾರಂಭಗಳಿಗೆ ಹೋಗುವಾಗ ಒಂದೇ ಒಂದು ವಜ್ರದ ನೆಕ್ಲೆಸ್ ತೊಟ್ಟರೂ ಅದು ಗ್ರ್ಯಾಂಡ್ ಲುಕ್ ಅನ್ನೇ ಕೊಡುತ್ತದೆ.







ವಜ್ರದ ಆಭರಣ ಸಾಂಪ್ರದಾಯಿಕ ಮತ್ತು ಆಧುನಿಕ ಎರಡೂ ಮನೋಭಾವಕ್ಕೆ ಸರಿಯಾಗಿ ಹೊಂದುತ್ತದೆ.

## ಮದುವೆಗಾಗಿ ಚಿನ್ನಾಭರಣ

ಮದುವೆಯ ಸೀಸನ್‌ನಲ್ಲಿ ಆಭರಣಗಳ ಖರೀದಿ ಜೋರು. ನೆಕ್ಲೆಸ್, ಕಿವಿಯೋಲೆ, ಬಳೆಗಳು, ಉಂಗುರಗಳನ್ನು ಇಂದಿನ ಟ್ರೆಂಡ್‌ಗೆ ತಕ್ಕಂತೆ ಧರಿಸಿದರೆ ಮದುಮಗಳು ಇನ್ನಷ್ಟು ಮಿಂಚುತ್ತಾಳೆ. ಚಿನ್ನ, ವಜ್ರದಲ್ಲಿ ಮಾಡಿದ ತರಾವರಿ ಆಭರಣಗಳ ಜತೆಗೆ ಮದುವೆಗೆ, ಪಾರ್ಟಿಗೆ, ಶುಭ ಕಾರ್ಯಕ್ರಮಕ್ಕೆ ಹೋಗುವ ಮಹಿಳೆಯರು ಹೊಸ ಹೊಸ ವಿನ್ಯಾಸಗಳ ಒಡವೆಗಳತ್ತ ಮುಖ ಮಾಡಿದ್ದಾರೆ. ಇದೇ ಸಾಲಿಗೆ ಸೇರುವ ಆಭರಣಗಳಲ್ಲಿ ಸೌತ್ ಹೆರಿಟೇಜ್ ಸಂಗ್ರಹವೂ ಒಂದು.

ಈ ಸಂಗ್ರಹದಲ್ಲಿ ಮುಖ್ಯವಾಗಿ ದಕ್ಷಿಣ ಭಾರತದ ವಿವಿಧ ದೇವಾಲಯಗಳಲ್ಲಿರುವ ದೇವಾನುದೇವತೆಗಳ ವಿಗ್ರಹಗಳಿಂದ ಪ್ರೇರಿತವಾಗಿ ತಯಾರಿಸಿದ ಆಭರಣಗಳಿವೆ. ವಧುಗಳು ಧರಿಸುವ ಸಾಂಪ್ರದಾಯಿಕ ಮತ್ತು ಸಮಕಾಲೀನ ಆಭರಣಗಳು ಇಂದಿನ ಟ್ರೆಂಡ್ ಕೂಡ ಆಗಿದೆ. ರೇಷ್ಮೆ ಸೀರೆಗೆ ಇಂತಹ ಆಭರಣಗಳು ಚೆನ್ನಾಗಿ ಒಪ್ಪುತ್ತವೆ. ಈ ಸಂಗ್ರಹದಲ್ಲಿ ಅನ್‌ಕಟ್ ಜೇಡ್ ಆಭರಣ, ವಿಕ್ಟೋರಿಯನ್ ಆಭರಣ ಹಾಗೂ ಸೌತ್ ಹೆರಿಟೇಜ್ ಆಭರಣಗಳೂ ಇದ್ದು ಮಹಿಳೆಯರನ್ನು ತಕ್ಷಣ ಸೆಳೆಯುತ್ತದೆ.

'ಇಂತಹ ಆಭರಣಗಳು ಸಾಂಪ್ರದಾಯಿಕ ಮತ್ತು ಸಮಕಾಲೀನ ಎರಡೂ ಮನೋಭಾವದವರನ್ನು ಸೆಳೆಯುತ್ತದೆ. ಅಲ್ಲದೆ ಎರಡೂ ರೀತಿಯ ಉಡುಗೆಗಳಿಗೆ ಸರಿ ಹೊಂದುತ್ತವೆ. ಹೀಗಾಗಿ ಗ್ರಾಹಕರು ಇಂತಹ ಆಭರಣಗಳನ್ನೇ ಇದೀಗ ಹೆಚ್ಚು ಹೆಚ್ಚು ಖರೀದಿಸುತ್ತಿದ್ದಾರೆ.

ಅನ್‌ಕಟ್ ಜೇಡ್ ಸಾಂಪ್ರದಾಯಿಕ ಆಭರಣ ಶ್ರೇಣಿಯಡಿ, ನೆಕ್ಲೆಸ್, ಕಿವಿಯೋಲೆ, ಬಳೆಗಳು, ಪಚ್ಚೆ, ವಜ್ರ, ಮಾಣಿಕ್ಯ ಹಾಗೂ ಚಿನ್ನದಿಂದ ತಯಾರಿಸಿದ ಆಕರ್ಷಕ ಮಾಂಗ್ಟೀಕಾಗಳು (ಹಣೆಯ ಮೇಲೆ ಧರಿಸುವಂತಹ ಆಭರಣ) ಲಭ್ಯ. ಈ ಸಂಗ್ರಹವು ವಧುವಿನ ವೈಭವಕ್ಕೆ ಸರಿ ಹೊಂದುವಂತಿದೆ, ಮದುವೆ, ಮುಂಜಿಗಳಂತಹ ಅದ್ದೂರಿಯ ಸಂದರ್ಭಗಳಲ್ಲಿ ಧರಿಸಲು ಸೂಕ್ತವಾಗಿವೆ. ■